ಪುರುಸೊತ್ತಿರುವುದಿಲ್ಲವೆಂದು ಶಾಹೆನಾಳ ಉಮ್ಮ ಹೇಳುತ್ತಿರುತ್ತಾಳೆ.

"ಯಾ ಅಲ್ಲಾ! ಹೆಂಡತಿ ಮಕ್ಕಳ ಬಳಿ ಕುಳಿತು ಒಂದು ಗಳಿಗೆ ಪ್ರೀತಿಯಿಂದ ಮಾತಾಡಲು ಆಗದಷ್ಟು ದುಡಿತ ಯಾಕಪ್ಪಾ" ಎಂದು ಅತ್ತೆಯೂ ಗೊಣಗುತ್ತಿರುವುದನ್ನು ಶಾಹೆನಾ ಕೇಳಿದ್ದಾಳೆ. ಹಾಗೆಂದು ದೊಡ್ಡವಳಾದ ಮೇಲೂ ಶಾಹೆನಾ ಸಾಗರಕ್ಕೆ ಹೋಗಿದ್ದು ಒಂದೆರೆಡು ಬಾರಿಯಷ್ಟೇ. ಈಗ್ಗೆ... ವರ್ಷದ ಕೆಳಗೆ ಸಜೀದ ದುಬೈಯಿಂದ ಬಂದಿದ್ದಾಗ ಅವನೊಟ್ಟಿಗೆ ಶಾಹೆನಾಳೂ ಹೋಗಿದ್ದು ಸಜೀದ ಒಂದು ರಾತ್ರಿ ಮಾತ್ರ ಅಲ್ಲಿದ್ದು ಮರು ದಿನದ ಬೆಳಗ್ಗೆಯೇ ಊರಿಗೆ ಹೊರಟುಬಿಟ್ಟಿದ್ದನಾದರೂ ಅಣ್ಣಅತ್ತಿಗೆಯ ಒತ್ತಾಯಕ್ಕೆ ಶಾಹೆನಾಳೊಂದಿಗೆ ಉಮ್ಮ ನಾಲ್ಕು ದಿನ ಉಳಿದಿದ್ದರು.

ಒಂದು ದಿನ ಶಾಹೆನಾ ಮಾವನಿಗೆ ಊಟಕ್ಕಿಡುತ್ತಿದ್ದ ಅತ್ತೆಯ ಹಿಂದೆ ಮುಂದೆ ಸುತ್ತುತ್ತ ತಾನೇ ತಯಾರಿಸಿದ್ದ ಖೀರನ್ನು ಚಂದದ ಹೂಗಳಿದ್ದ ಪಿಂಗಾಣಿಯ ಬಟ್ಟಲಲ್ಲಿ ಮಾವನಿಗೆ ಕೊಟ್ಟಿದ್ದಳು.

ಜಾಸ್ತಿ ಮಾತೇ ಆಡದ ಮಾವ ಕೂಡ ಖೀರನ್ನು ಚಪ್ಪರಿಸುತ್ತ ಯಾರು ಮಾಡಿದ್ದು? ಶಾಹೇನಾನೇ? ಅವಳ ಹಾಗೇ ಖೀರೂ ಕೂಡ ಒಳ್ಳೇ ಹಾಲು ಜೇನಿನಂತಿದೆ ಎಂದು ಪ್ರಶಂಸಿಸಿದಾಗ ಮೈಯಲ್ಲಿನ ರಕ್ತವೆಲ್ಲ ಮುಖಕ್ಕೆ ನುಗ್ಗಿ ಕಿವಿ ಕೆಂಪಾಗಿತ್ತು. ಅದಕ್ಕೆ ಕಾರಣವೂ ಇತ್ತು. ಮಾವ ಪ್ರಶಂಸೆಯೊಂದೇ ಅಲ್ಲ, ಮತ್ತೊಂದು ಮಾತನ್ನೂ ಸೇರಿಸಿದ್ದರು. ನಮ್ಮ ಶಾಹೆನಾಳ ಗಂಡ ಆಗುವವನದು ಒಳ್ಳೇ ನಸೀಬ ನೋಡು, ಜೇನಂತ ಹೆಂಡತಿ ದಿನವೂ ಅವಳು ತಯಾರಿಸುವ ಹಾಲಿನ ಪಾಯಸ... ಮತ್ತೇನು ಬೇಕು ಆ ಗಂಡನಿಗೆ? ಎಂದು ತಮಾಷೆಯಾಗಿ ಶಾಹೆನಾಳ ಉಮ್ಮನೊಂದಿಗೆ ಹೇಳಿದ್ದು.

ಆದರೇನೋ ಅತ್ತೆಗೆ ಮಾತ್ರ ಆ ಮಾತಿನಿಂದ ತುಸು ಇರಿಸುಮುರಿಸಾಗಿತ್ತು. ಊರಿಗೆ ಬರುವ ದಿನ ಮಾತಿನ ನಡುವೆ ಅವಳದನ್ನು ಆಡಿಯೂ ತೋರಿದ್ದಳು.

"ನೀವೆಂದು ಬರುವುದು ಅತ್ತಿಗೆ? ನಾಲ್ಕು ದಿನವಿದ್ದು ಬರುವಿರಂತೆ, ಅಣ್ಣನಿಗೆ ಬೇಕಾದ್ರೆ ನಾನು ಕೇಳಲೇ" ಎಂದಿದ್ದರು ಶಾಹೆನಾಳ ಉಮ್ಮ.

"ಬರೋಣವಂತೆ. ಹೇಗೂ ಶಾಹೆನಾ ಇನ್ನೇನು ನೋಡು ನೋಡುತ್ತಲೇ ಪರಿಯಂತೆ ಬೆಳೆದ್ಬಿಟ್ಟು ನವಾಬನೊಂದಿಗೆ ಅವಳ ಮದ್ವೆಯಾಗತ್ತೆ. ಆಗೆಲ್ಲ ಬಂದು ಬೇಕಷ್ಟು ದಿನ ಉಳಿದರಾಯಿತು..." ಎಂದು ತುಂಬ ಚಂದವಾಗೇ ಹೇಳಿದ್ದರು ಅತ್ತೆ. ಆದರೆ ಅವಳ ಕೊಂಕು ಅರ್ಥವಾಗದ್ದೇನಲ್ಲ ಶಾಹೆನಾ ಮತ್ತು ಅವಳಮ್ಮನಿಗೆ.

ಶಾಹೆನಾ ಈಗ ಹಜಾರದ ಪಕ್ಕಕ್ಕಿರುವ ರೂಮಿಗೆ ನುಸುಳಿಬಿಟ್ಟಿದ್ದಳು. ಅಲ್ಲಿರುವ ಪುಟ್ಟ ಕಿಟಕಿಯಿಂದ ಅವಳಿಗೆ ಎಲ್ಲವೂ ಕಾಣುತ್ತಿದೆ ಕೇಳುತ್ತಿದೆ. ಮಾವ ಬಂದಿರುವನೆಂದು ಸಂಭ್ರಮಪಡುತ್ತಿರುವ ಉಮ್ಮ ಮತ್ತು ಮಾವನ, ಉಮ್ಮನ ಮಾತುಗಳು.

"ಅಣ್ಣ, ಹೇಗೋ ಅಪರೂಪಕ್ಕೆ ಬಂದಿದ್ದೀಯಾ ಈ ರಾತ್ರಿ ಇದ್ದು ಹೋಗ್ಬಾರ್ದೇ..." ಉಮ್ಮ ಮಾವ ಮತ್ತು ಅಬ್ಬುವಿಗೆ ಊಟವಿಡುತ್ತ ಹೇಳುತ್ತಿದ್ದಾಳೆ.

"ಇಲ್ಲಿ ಟ್ರಾನ್ಸ್‌ಪೋರ್ಟಿನಲ್ಲಿ ಏನೋ ರಗಳೆಯಿತ್ತು, ಅದಕ್ಕೆ ನಾನೇ ಬಂದೆ. ಸಂಜೆಯೊಳಗೆ ಸಾಗರ ಮುಟ್ಬೇಕು..." ಎಂದೇನೋ ಮಾವ ಹೇಳಿದರು.

ಊಟ ಮುಗಿಯಿತು. ಹಮೀದ ಉಮ್ಮಳೊಂದಿಗೆ ಅಡಿಗೆಯ ಪಾತ್ರೆಗಳನ್ನು ಎತ್ತಿಡುತ್ತಿದ್ದಾನೆ. ಎಲ್ಲ ನೋಡುತ್ತಿದ್ದರೂ ಶಾಹೆನಾ, ಉಮ್ಮ ಎರಡು ಬಾರಿ ಕರೆದರೂ ಹೊರ ಬರದೇ ಅಲ್ಲೇ ರೂಮಿನ ಹಾಸಿಗೆಯ ಮೇಲೆ ಕುಳಿತು ಕಿಟಕಿಯಿಂದ ಇಣುಕುತ್ತಲೇ ಇದ್ದಾಳೆ. ಏನೋ ಸಂಕೋಚ ಅವಳಿಗೆ. ಜೊತೆಗೆ ಸೀರೆ ಬೇರೆ ಉಟ್ಟಿದ್ದಾಳೆ.

ಕೊನೆಗೆ ಮಾಮ ಕೇಳುತ್ತಾರೆ ಎಲೆ–ಅಡಿಕೆ ಬಾಯಿಗಿಡುತ್ತ, "ಎಲ್ಲಿ ಶಾಹೆನಾ ಕಾಣ್ತಾ ಇಲ್ಲ?" ಎಂದು.